ವಾರದ ಪತ್ರ

## ಸುದ್ದಿ ವಾಹಿನಿಗಳ ಸೆಣಸಾಟ

ಇತ್ತೀಚಿನ ದಿನಗಳಲ್ಲಿ ಕನ್ನಡದ ಸುದ್ದಿ ವಾಹಿನಿಗಳ ಕಾರ್ಯಕ್ರಮಗಳನ್ನು ನೋಡಿದರೆ ಬೇಸರ ಬರುತ್ತದೆ. ಆರಂಭದಲ್ಲಿ ಇದ್ದ ಆಸಕ್ತಿ ಮರೆಯಾಗುತ್ತಿರುವುದು ವಿಷಾದನೀಯ. ತಮ್ಮ ವೀಕ್ಷಕರಿಗೆ ಒಳ್ಳೆಯ ಕಾರ್ಯಕ್ರಮ ಕೊಡಬೇಕೆಂಬ ಅಭಿರುಚಿ ಅವರಲ್ಲಿ ಕಾಣಬಹುದು ಎಂಬ ನಿರೀಕ್ಷೆ ಹುಸಿಯಾಗುತ್ತಿದೆ.

ಸುದ್ದಿ ವಾಹಿನಿಗಳು ಯಾವಾಗಲೂ ಪ್ರಸಾರ ಮಾಡುತ್ತಿದ್ದ ಕಾರ್ಯಕ್ರಮವನ್ನು ರದ್ದು ಮಾಡಿ ಬೆಳಿಗ್ಗೆ 6 ಗಂಟೆಗೆ ಸಾವಿನ ಸುದ್ದಿಯನ್ನು ಪ್ರಸಾರ ಮಾಡುವ ಅಗತ್ಯವಿತ್ತೇ? ದೇಶದ ಇತರ ಸುದ್ದಿ ಇವರಿಗೆ ಅಗತ್ಯವಿಲ್ಲವೇ? ವೀಕ್ಷಕರು ಯಾವಾಗಲೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಿರೀಕ್ಷಿಸುತ್ತಾರೆ. ಅದಕ್ಕೆ ವಿರುದ್ಧವಾಗಿ ನಿರಂತರವಾಗಿ ರಾತ್ರಿಯ ತನಕ ಚರ್ಚೆ ವೇದಿಕೆ ಪ್ರಸಾರ ಮಾಡುವುದು ಎಷ್ಟು ಸಮಂಜಸ?

ಎಲ್ಲಾ ವಾಹಿನಿಗಳನ್ನು ನೋಡಿದರೆ ಇವರು ಸರಿಯಾಗುವುದು ಕಷ್ಟ ಎನಿಸುತ್ತದೆ. ನಾವೇ ಮೊದಲಿಗರು ಎಂಬ ಹಣೆಪಟ್ಟಿ ಮಾಡಿ ಪ್ರಸಾರ ಮಾಡಿ ಜನರನ್ನು ಮಂಗ ಮಾಡುತ್ತಿದ್ದಾರೆ. ಇನ್ನಾದರೂ ಸುದ್ದಿ ವಾಹಿನಿಗಳು ತಮ್ಮ ಕರ್ತವ್ಯಗಳನ್ನು ನೋಡಿ ಬದಲಾವಣೆ ಮಾಡಿಕೊಳ್ಳುವುದು ಉತ್ತಮ. ಏಕೆಂದರೆ ಟಿ.ವಿಯ ರಿಮೋಟ್ ಇರುವುದು ನಮ್ಮ ಕೈಯಲ್ಲಿ ಅಲ್ಲವೇ?

— ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

## ಪುರುಷ ಪಕ್ಷಪಾತ?

ಝೀ ಕನ್ನಡದ 'ವರಮಹಾಲಕ್ಷ್ಮೀ ವೈಭವ' ಸಂದರ್ಭೋಚಿತವಾಗಿದ್ದು ವರಮಹಾಲಕ್ಷ್ಮೀ ಹಬ್ಬಕ್ಕೆ ವಿಶೇಷ ಕಳೆ ತಂದಂತೆ ಇತ್ತು.

ಶ್ರಾವಣ ಮಾಸದ ಶುಕ್ಲ ಪಕ್ಷದ 15ನೇ ದಿನ ಝೀ ಕುಟುಂಬ ಒಗ್ಗೂಡಿ ಹಬ್ಬ ಹಾಗೂ ಕೌಟುಂಬಿಕ ಮನರಂಜನೆಯ ರಸದೌತಣವನ್ನೇ ನೀಡಿದೆ. ಮಹಾಲಕ್ಷ್ಮಿಯ ಪ್ರತೀಕದಂತಿರುವ (ಧಾರಾವಾಹಿಗಳ) ಸ್ತ್ರೀ ಮಣಿಯರೆಲ್ಲಾ ಭಾಗವಹಿಸಿ ಆಟವಾಡಿದ್ದು ವಿಶೇಷ.

ಧಾನ್ಯಲಕ್ಷ್ಮಿ ತಂಡ ಮತ್ತು ಧನಲಕ್ಷ್ಮಿ ತಂಡ ತಮ್ಮತಮ್ಮ ಆಟಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿ ಸಾರ್ಥಕತೆ ಮೆರೆದರು. ಆದರೆ ಧಾನ್ಯಲಕ್ಷ್ಮಿ ತಂಡದ ಕೊಡದ ಮೇಲಿನ ಡ್ಯಾನ್ಸ್ ಸ್ಪರ್ಧೆಯಲ್ಲಿ ಕಮಲಿ ಕೊಡದ ಮೇಲಿಂದ ಬೀಳದಿದ್ದರೂ ನಿರೂಪಕರು ಅನರ್ಹಗೊಳಿಸಿದ್ದು ಉದ್ದೇಶಪೂರ್ವಕವೆಂಬಂತಿತ್ತು. ಮಾತ್ರವಲ್ಲದೆ ಮಹಾಲಕ್ಷ್ಮಿಯ ಪೂಜೆಯಾದ್ದರಿಂದ ಕೇವಲ ಮಹಿಳೆಯರಿಂದ ಪೂಜೆ ಮಾಡಿಸುವುದು ಸಮಂಜಸವಾದರೂ ಕಾರ್ಯಕ್ರಮದ ಪಂದ್ಯಾಟಗಳಲ್ಲಿ ಧಾರಾವಾಹಿಗಳ ಪುರುಷ ಕಲಾವಿದರನ್ನು ನುಸುಳದಂತೆ ಮಹಿಳಾಪರ ವಹಿಸಿದ್ದು ಪಕ್ಷಪಾತಕ್ಕೆಡೆ ಮಾಡಿದೆ!

ಅದೇನಿದ್ದರೂ ನಡು ನಡುವೆ ನೃತ್ಯ, ಸಂಗೀತ, ನಟನೆ, ಪೂಜೆಗಳ ಸಹಿತ ಒಟ್ಟಾರೆ ಕಾರ್ಯಕ್ರಮ ಹಬ್ಬದ ವಾತಾವರಣದಲ್ಲಿ ಮನಬಿಚ್ಚಿ ಆನಂದಿಸಲು ಅನುವು ಮಾಡಿಕೊಟ್ಟಿತು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಗೊಂದಲಗಳ ಗೂಡು

ಸುಮಾರು ಐದು ಗಂಟೆ ನಡೆದ 'ಕನ್ನಡ ಕೋಗಿಲೆ' ಗ್ರ್ಯಾಂಡ್ ಫಿನಾಲೆ ಮನರಂಜನೆಗಿಂತ ಒಂದು ರೀತಿಯ ಹಿಂಸೆ ವೀಕ್ಷಕರನ್ನು ನೀಡಿತು. ಫಿನಾಲೆ ತಲುಪಿದ ಆರು ಮಂದಿ ತಮ್ಮ ಕೆಲಸ ಮಾಡಿ ಮುಗಿಸಿದರು, ಆದರೆ ಪದೇ ಪದೇ 'ಈ ಬಾರಿಯ ವಿನ್ನರ್ ಯಾರು ಎಂದರೆ' ಎಂಬ ಮಾತು ಕೇಳಿ ಕೇಳಿ ಸಹನೆ ಸತ್ತೇ ಹೋಯಿತು. ಸ್ಪರ್ಧೆ ಎಂದ ಮೇಲೆ ಯಾರೋ ಒಬ್ಬರು ಗೆಲ್ಲಲೇಬೇಕು. ಗೆಲ್ಲುವುದು ಟ್ರೋಫಿ ಪಡೆದುಕೊಳ್ಳುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯವೇ. ಇನ್ನು ಮಿಕ್ಕ ಕೋಗಿಲೆಗಳು ಹಾಡುವಾಗ ಹಿಂಬದಿಯಲ್ಲಿ ನೃತ್ಯ ಮಾಡಿದವರು ತಮಗೆ ಇಷ್ಟ ಬಂದ ಹಾಗೆ ಕುಣಿಯುತ್ತಿದ್ದರು. ಅವರ ಮುಖದಲ್ಲೂ ಪ್ರೇತ ಕಳೆ ತುಳುಕುತಿತ್ತು. ಅಲ್ಲದೆ ಯಾರೋ ಒಬ್ಬರಿಗೇ ಮಣೆ ಹಾಕಿ ಅವರ ಕೈಯಲ್ಲೇ ಸುಮಾರು ಹಾಡುಗಳನ್ನು ಹಾಡಿಸಿದ್ದು ಮಿಕ್ಕ ಕೋಗಿಲೆಗಳಿಗೆ ಬೆಲೆಯೇ ಇಲ್ಲವೆನ್ನುವಂತೆ ಮಾಡಿತು. ಇದೇ ಕಾರ್ಯಕ್ರಮ ಎರಡು ತಾಸಿನಲ್ಲಿ ಸಂಕ್ಷೇಪಿಸಿ ಬಿತ್ತರಿಸಿದ್ದರೆ ಚೆನ್ನಾಗಿರುತ್ತಿತ್ತು.

—ಎಸ್.ಎಸ್.ಚಂದ್ರಶೇಖರ್, ಬೆಂಗಳೂರು

## ಎಲ್ಲವೂ ವಿಚಿತ್ರ

ಕಲರ್ಸ್‌ನ 'ಮಗಳು ಜಾನಕಿ'ಯ ಡಿವೈಎಸ್ಪಿ (ನಾಯಕಿ) ಬುದ್ಧಿವಂತ ಅಧಿಕಾರಿ ಎಂದೆನಿಸುವುದೇ ಇಲ್ಲ. ಟೀವಿಯಲ್ಲಿ ಕಾಣಿಸಿಕೊಂಡ ವ್ಯಕ್ತಿಯೊಬ್ಬರ ಕುರಿತು ಸಂಜನಾ ಹೇಳಿದರೂ ಚಾನಲ್‌ಗೆ ಫೋನ್ ಮಾಡಿ ವಿಚಾರಿಸದೆ ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವ, ವಿದೇಶಿ ನಿಯೋಗದ ಗಣ್ಯರೊಬ್ಬರನ್ನು ಮೊದಲು ಅವರಿದ್ದಲ್ಲಿಗೆ ಹೋಗಿ ವಿಚಾರಿಸದೆ ಸ್ಟೇಶನ್‌ಗೆ ಬರುವಂತೆ ಫೋನ್ ಮಾಡುವುದು ನಂತರ ಗೃಹಮಂತ್ರಿಯ ಮನೆಗೆ ವಿಚಾರಣೆಗೆ ಬರುವುದು, ತನ್ನ ಮನೆಯವರಂತಿರುವವರಿಂದ ಹೇಳಿಕೆ ಪಡೆಯಲು ದಿಢೀರ್ ಬರುವುದು ವಿಚಿತ್ರ.

ಬಿಗಿ ಭದ್ರತೆಯಿದ್ದರೂ ಚೋರನಂತೆ ಲೀಲಾಜಾಲವಾಗಿ ಕೊಠಡಿಯೊಳಗೆ ಸಂಜನಾ ಬಂದು ಸೇರಿಕೊಳ್ಳುವುದು, ಮುಖ್ಯಮಂತ್ರಿ ಕಚೇರಿಗಿಂತ ನಿರಂಜನ್ ಮನೆಯ ಹಾಲ್ ಭರ್ಜರಿಯಾಗಿರುವುದು ವಿಚಿತ್ರವೇ.

—ಜಯಪ್ರಕಾಶ್ ತಲವಾಟ, ಸಾಗರ

## ಧಾರಾವಾಹಿಗಳು ಹೇಳುವಂತಿಲ್ಲ

ಝೀ ಕನ್ನಡದಲ್ಲಿ ಸಂಗೀತಾಧಾರಿತ 'ಸರಿಗಮಪ', 'ವೀಕೆಂಡ್ ವಿತ್ ರಮೇಶ್' ಮತ್ತು 'ಕನ್ನಡ ಕಣ್ಮಣಿ', 'ಡ್ರಾಮಾ ಜೂನಿಯರ್'ನಂಥಾ ಕಾರ್ಯಕ್ರಮಗಳಿಂದ ವೀಕ್ಷಕರ ಮನಸೂರೆಗೊಂಡಿದ್ದಾರೆ. ಆದರೆ ಈ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳು 'ಕಮಲಿ', 'ಯಾರೇ ನೀ ಮೋಹಿನಿ', 'ಪಾರು', 'ಗಟ್ಟಿಮೇಳ' ತೀರಾ ಕಳಪೆ, ನಿರಾಸೆ ಹುಟ್ಟಿಸುವಂತಿವೆ. ಅಸಂಬದ್ಧ ಪಾತ್ರ, ಗೃಹಿಣಿಯರು ಸುಪಾರಿ ಕೊಡುವುದು, ರೌಡಿಗಳನ್ನು ಛೂ ಬಿಡುವುದು, ಕ್ಷುಲ್ಲಕ ವಿಷಯಗಳನ್ನೇ ಬಂಡವಾಳ ಮಾಡಿಕೊಂಡಿವೆ. ಮಹಿಳೆಯರನ್ನು ತಪ್ಪು ದಾರಿಗೆಳೆಯಲು ಪ್ರೇರೇಪಿಸುವಂತಿವೆ. ದಯಮಾಡಿ ಈ ಸತ್ವರಹಿತ ಧಾರಾವಾಹಿಗಳನ್ನು ನಿಲ್ಲಿಸಿ, ಕನ್ನಡದ ಸೊಗಡಿನ ಕಥೆ, ಕಾದಂಬರಿಗಳನ್ನು ಧಾರಾವಾಹಿಯಾಗಿಸಿದರೆ ಚೆನ್ನಾಗಿರುತ್ತದೆ.

—ಕೆ. ಶ್ರೀನಿವಾಸ್, ಬೆಂಗಳೂರು

## ನಿಜಕ್ಕೂ ದಿವ್ಯ ದರ್ಶನ

'ಚಂದನ'ದಲ್ಲಿ ಎರಡು 'ಜನಪ್ರಿಯ' ಕಾರ್ಯಕ್ರಮಗಳೆಂದರೆ ದಿವ್ಯದರ್ಶನ ಹಾಗೂ ಶುಭೋದಯ. 'ದಿವ್ಯ ದರ್ಶನ' ವೀಕ್ಷಣೆಯಿಂದ ಪ್ರತಿದಿನ ನಾವು ದೇವಸ್ಥಾನಕ್ಕೆ ಭೇಟಿ ಕೊಟ್ಟ ಅನುಭವವಾಗುತ್ತದೆ. ದೇವಸ್ಥಾನದ ವಿಶೇಷತೆಯ ಬಗ್ಗೆ ವಿವರಣೆ ಜೊತೆಗೆ ಮಂತ್ರಘೋಷ, ಭಜನೆ ಇವುಗಳನ್ನು ಒಳಗೊಂಡ ಅರ್ಧಗಂಟೆಯ ಕಾರ್ಯಕ್ರಮ ವೀಕ್ಷಕರಿಗೆ ಮುದ ನೀಡುತ್ತಿದೆ.

ಇನ್ನು ಶುಭೋದಯದಲ್ಲಿ ಪ್ರತಿದಿನ ಒಬ್ಬ ಸಾಧಕರ ಪರಿಚಯ ಮಾಡಿಕೊಡಲಾಗುತ್ತದೆ. ನಿರೂಪಕರಾದ ಶ್ರೀನಿವಾಸ್, ರೆಹಮಾನ್, ಮಂಗಳ, ವಿಜಯೇಂದ್ರ, ಶ್ವೇತ ಇವರ ಪ್ರೋತ್ಸಾಹದಾಯಕ ಮಾತುಗಳಿಂದ ಪ್ರೇರಿತರಾಗುವ ಅತಿಥಿಗಳು ತಮ್ಮ ಅನುಭವವನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾರೆ. ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳನ್ನು, ಅತಿಥಿಗಳು ವಿವರಿಸುವುದರಿಂದ, ವೀಕ್ಷಕರ ಜ್ಞಾನವೃದ್ಧಿಯಾಗುತ್ತದೆ. ಅಷ್ಟೇ ಅಲ್ಲ, ಯೋಗ, ನೆನಪಿನಂಗಳ, ಸೌಂದರ್ಯ ಸಲಹೆ ಮುಂತಾದ ಕಾರ್ಯಕ್ರಮಗಳು 'ಶುಭೋದಯ'ಕ್ಕೆ ಮೆರಗನ್ನು ತಂದು ಕೊಟ್ಟಿದೆ. ಮನಸ್ಸು ಇಡೀ ದಿನ ಲವಲವಿಕೆಯಿಂದ ಕೂಡಿರುತ್ತದೆ ಎಂಬುದು ನನ್ನ ವೈಯಕ್ತಿಕ ಅನುಭವ. ಇದಕ್ಕಾಗಿ 'ಚಂದನ' ವಾಹಿನಿಗೆ ನನ್ನ ಧನ್ಯವಾದಗಳು.

—ಪದ್ಮಶ್ರೀ. ಹೆಚ್.ಎಸ್., ಬೆಂಗಳೂರು